**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಕ್ರಿಮಿನಲ್ ಮಿಸಲೆನ್ಸ ನಂ.363/2020**

| | | |
|---|---|---|
| ಸಾಕ್ಷಿದಾರರ ಹೆಸರುಃ | ಚೇತನ್ | ಆರ್ ಡಬ್ಲ್ಯೂಃ 1 |
| ತಂದೆಯ ಹೆಸರುಃ | ಮಾದಪ್ಪ | |
| ವಯಸ್ಸುಃ | 45 ವರ್ಷ | |
| ಉದ್ಯೋಗಃ | ಖಾಸಗಿ ಕೆಲಸ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಕೆನ್ನಾಳುಗ್ರಾಮ, ಪಾಂಡವಪುರ ತಾಲ್ಲೂಕು | 19.10.2023 |

**ಮುಖ್ಯ ವಿಚಾರಣೆಃ** ಎದುರುದಾರರ ಪರ ಶ್ರೀ **ಕೆ.ಎಂ.ಯು** ವಕೀಲರವರಿಂದಃ

ದಿನಾಂಕ 13.11.2009 ರಂದು ನಾನು ಅರ್ಜಿದಾರರಳನ್ನು ಶ್ರೀರಂಗಪಟ್ಟಣ ತಾಲ್ಲೂಕಿನ ಬಾಬುರಾಯನಕೊಪ್ಪಲು ಗ್ರಾಮದಲ್ಲಿ ಭಾರತಿ ಕಲ್ಯಾಣ ಮಂಟಪದಲ್ಲಿ ಸರಳ ವಿವಾಹ ಆಗಿರುತ್ತೇನೆ. ನಾನು ನನ್ನ ಸ್ವಂತ ಖರ್ಚಿನಿಂದ ಎದುರುದಾರರನ್ನು ಮದುವೆ ಆಗಿರುತ್ತೇನೆ. ನಾನು ಎದುರುದಾರರ ಕುಟುಂಬದಿಂದ ಯಾವುದೇ ವರದಕ್ಷಿಣೆ ಪಡೆಯದೇ ಮದುವೆ ಆಗಿರುತ್ತೇನೆ. ನನಗೆ 10 ವರ್ಷದ ಮಗಳು ಶರ್ಮಿತಾ.ಸಿ ರವರು ಇದ್ದು, ಸದರಿಯವರು ಈ ಪ್ರಕರಣದ 2 ನೇ ಅರ್ಜಿದಾರರಾಗಿದ್ದು, ಸದರಿಯವರು ಪಿ.ಎಸ್.ಎಸ್.ಕೆ ಪಬ್ಲಿಕ ಸ್ಕೂಲ್ ನಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದಾರೆ. ಸದರಿಯವರನ್ನು ಮೊದಲು ನಾನೇ ಓದಿಸುತ್ತಿದ್ದೆನು. ಮದುವೆಯ ನಂತರ ಸುಮಾರು 6 ರಿಂದ 7 ವರ್ಷಗಳ ಕಾಲ ಚೆನ್ನಾಗಿ ಇದ್ದೆವು. 1 ನೇ ಅರ್ಜಿದಾರರು ಅವರ ತಾಯಿಯ ಚಾಡಿ ಮಾತುಗಳನ್ನು ಕೇಳಿಕೊಂಡು ಸಣ್ಣಪುಟ್ಟ ವಿಚಾರಕ್ಕೆ ನನ್ನೊಂದಿಗೆ ಜಗಳ ಮಾಡುತ್ತಿದ್ದರು. ಸದರಿಯವರು ನನ್ನನ್ನು ಹಾಗೂ ನನ್ನ ತಂದೆ-ತಾಯಿಯವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ. ಸದರಿಯವರು ನನಗೆ ಹೇಳದೇ ಅಥವಾ ತಿಳಿಸದೇ 2 ನೇ ಅರ್ಜಿದಾರರನ್ನು ಕರೆದುಕೊಂಡು ತವರು ಮನೆಗೆ ಹೋಗುತ್ತಿದ್ದರು. ನಾನು ಅವರನ್ನು ಕರೆದುಕೊಂಡು ಬರಲು ಹೋದಾಗ ಸದರಿಯವರು ಬರುವುದಿಲ್ಲ ಎಂದು ನನಗೆ ಅವಮಾನ ಮಾಡುತ್ತಿದ್ದರು. ನಾನು ಎಷ್ಟೇ ಬುದ್ದಿವಾದ

ಹೇಳಿದ್ದರೂ ಸಹ ಸದರಿಯವರು ನನ್ನ ಮಾತುಗಳನ್ನು ಕೇಳುತ್ತಿರಲಿಲ್ಲ. ಸದರಿ ಒತ್ತಡದಿಂದ ನನಗೆ ಪಾರ್ಶ್ವವಾಯು ರೋಗ ಬಂದಿರುತ್ತದೆ. ನಾನು ಮೊದಲು ಜೆ.ಕೆ ಟೈಯರ್ಸ ಸಂಸ್ಥೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದು, ನನಗೆ ಪಾರ್ಶ್ವವಾಯು ಆದ ನಂತರ ಕೆಲಸಕ್ಕೆ ಹೋಗಲು ಆಗಿರುವುದಿಲ್ಲ ಮತ್ತು ನನ್ನನ್ನು ಕೆಲಸದಿಂದ ತೆಗೆದು ಹಾಕಿರುತ್ತಾರೆ. ನನ್ನನ್ನು ಕೆಲಸದಿಂದ ತೆಗೆದ ನಂತರ ಅರ್ಜಿದಾರರು ನನಗೆ ವೈಬೋಗದ ಜೀವನ ನಡೆಸುವ ಬಾಬ್ತು ಕಿರುಕಳು ನೀಡುತ್ತಿದ್ದರು ಹಾಗೂ ತನ್ನ ಮಗಳನ್ನು ಕರೆದುಕೊಂಡು ತವರು ಮನೆಗೆ ಹೋಗಿರುತ್ತಾರೆ. ಹಿರಿಯರ ಸಮಕ್ಷಮದಲ್ಲಿ ನನ್ನ ಮತ್ತು ಅರ್ಜಿದಾರರ ಪಂಚಾಯತಿ ನಡೆದಿರುತ್ತದೆ. ಸುಮಾರು 6 ತಿಂಗಳ ಕಾಲ ಸದರಿಯವರು ಚೆನ್ನಾಗಿಯೇ ಇದ್ದು, ಪುನಃ ಮೊದಲಿನಂತೆಯೇ ಕಿರುಕುಳ ನೀಡಲು ಪ್ರಾರಂಭಿಸಿರುತ್ತಾರೆ. ಇದಾದ ನಂತರ ನಾನು ಸುಮ್ಮನಿದ್ದು , ಅರ್ಜಿದಾರರುಗಳು ಅವರ ತಾಯಿಯ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ನಾನು ಪ್ರಸ್ತುತ ಶ್ರೀರಂಗಪಟ್ಟಣ ತಾಲ್ಲೂಕಿನ ಚಿನ್ನನಾಯಕನಹಳ್ಳಿ ಗ್ರಾಮದಲ್ಲಿರುವ ನಾಯರ ಪೆಟ್ರೋಲ್ ಬಂಕ್ ನಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ರೂ.15 ಸಾವಿರ ಮಾಸಿಕ ವರಮಾನ ಇರುತ್ತದೆ.

ಅರ್ಜಿದಾರರ ಕುಟುಂಬದವರು ಆರ್ಥಿಕವಾಗಿ ಚೆನ್ನಾಗಿ ಇರುತ್ತಾರೆ.ಆದಕಾರಣ ಸದರಿಯವರಿಗೆ ಜೀವನಾಂಶದ ಅವಶ್ಯಕತೆ ಇರುವುದಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ ಹಾಗೂ ಯಾವುದೇ ಬೇರೆ ಆದಾಯ ಇರುವುದಿಲ್ಲ. ಅರ್ಜಿದಾರರ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಅರ್ಜಿದಾರರ ಪರ ಶ್ರೀ ಎಚ್.ಆರ್.ಎಸ್ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**